**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **49/2023**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **02**
ಸಿ.ಡಬ್ಲ್ಯೂ ನಂಃ **02**
ಸಾಕ್ಷಿಯನ್ನು ದಿನಾಂಕಃ **13-01-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರಳ ಹೆಸರು | : | ಸುಮಂಗಲಾ |
| ಗಂಡನ ಹೆಸರು | : | ವೆಂಕಟೇಶ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಲಿಂಗನಬಂಡಿ |

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ಚಾಸಾ 1 ನನ್ನ ತಂದೆ. ಕಾರಾಗೃಹದಿಂದ ವಿಸಿ ಮೂಲಕ ಹಾಜರುಪಡಿಸಿದ ವ್ಯಕ್ತಿ ನನ್ನ ಗಂಡ. ದಿಃ 15-8-2012 ರಂದು ನಮ್ಮ ಮದುವೆ ಪುಟುಗಮರಿ ಗ್ರಾಮದಲ್ಲಿ ಆಗಿತ್ತು. ಮದುವೆ ಸಮಯ 2 ತೊಲಿ ಬಂಗಾರ, 2 ಲಕ್ಷ ರೂ. ಮಾತುಕತೆ ಆಗಿತ್ತು. ಬಂಗಾರ ಕೊಡಲಾಗಿತ್ತು ಆದರೆ 2 ಲಕ್ಷ ರೂ. ಹಣವನ್ನು ನನ್ನ ತಂದೆ -ತಾಯಿ ಕೊಟ್ಟಿರಲಿಲ್ಲ. ಆದರೆ ಹಣವನ್ನು ನಂತರ ಕೊಡುವುದಾಗಿ ಹೇಳಿದ್ದರು.

2). ಮದುವೆಯಾದ ನಂತರ ಯಲಬುರ್ಗಾದಲ್ಲಿ ಮನೆ ಮಾಡಿಕೊಂಡು ವಾಸ ಇದ್ದೆವು. ಆರೋಪಿ ಮೋಟರ ವೈಂಡಿಂಗ್ ಕೆಲಸ ಮಾಡುತ್ತಿದ್ದ. ನಮಗೆ ಇಬ್ಬರು ಮಕ್ಕಳು ಇದ್ದಾರೆ. ನಾವು 4-5 ವರ್ಷ ಚೆನ್ನಾಗಿದ್ದೆವು. ನಂತರ ಕಿರುಕುಳ ಕೊಟ್ಟು ಕುಡಿದು ಬಂದು ಬೈಯ್ಯುವುದು ಹೊಡಿ-ಬಡಿ ಮಾಡುತ್ತಿದ್ದ. ಖರ್ಚಿಗೆ ರೊಕ್ಕ ಇಲ್ಲ 2 ಲಕ್ಷ ರೂ. ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದ. ಈ ವಿಚಾರವನ್ನು ನಮ್ಮ ತಂದೆಗೆ ಹೇಳಿದೆ. ಅಷ್ಟು ಹಣ ಇಲ್ಲ ರೂ.30,000/- ಮಾತ್ರ ಇದೆ ಅದನ್ನು ತೆಗೆದುಕೊಂಡು ಹೋಗಿ ಕೊಡು ಎಂದು ಚಾಸಾ 1 ಹೇಳಿದ ಕಾರಣ ನಾನು ಆ ಹಣವನ್ನು ತಂದು ನನ್ನ ಗಂಡನಿಗೆ ಕೊಟ್ಟೆ. ಅದು ಸಾಕಾಗಿಲ್ಲ ಎಂದು ಅವರಿಗೆ ಸಮಾಧಾನ ಆಗದೇ ಮತ್ತೆ ನನ್ನನ್ನು ಹೊಡೆಯುವುದು ಬಡಿಯುವುದು

ಮಾಡುತ್ತಿದ್ದ. ಈ ವಿಚಾರವನ್ನು ನಾನು ಚಾಸಾ 1 ರವರಿಗೆ ಹೇಳಿದಾಗ ಅವರು 4-5 ಮಂದಿ ಹಿರಿಯರನ್ನು ಕರೆದುಕೊಂಡು ಬಂದು ಆರೋಪಿಗೆ ಬುದ್ದಿವಾದ ಹೇಳಿ ಹೋದರು. ಆದರೂ ಸಹಾ ಆರೋಪಿ ಕಿರುಕುಳ ಕೊಡುವುದನ್ನು ಮುಂದುವರಿಸಿದ್ದ. ನನ್ನ ಮಗಳನ್ನು ಚೆನ್ನಾಗಿ ನೋಡಿಕೋ ದುಡಿದು ಹಣ ತಂದು ಕೊಡುವುದಾಗಿ ಚಾಸಾ 1 ಆರೋಪಿಗೆ ಹೇಳಿದ್ದ.

**3).** ನಂತರ ನಾನು ಇಬ್ಬರು ಮಕ್ಕಳನ್ನು ಕರೆದುಕೊಂಡು ತವರುಮನೆ ಲಿಂಗನಬಂಡಿಗೆ ಹೋದೆ. ಒಂದು ವಾರ ಆದ ನಂತರ ಆರೋಪಿ ನಮ್ಮ ಊರಿಗೆ ಬಂದು ನಾನು ಕುಡಿಯುವುದಿಲ್ಲ, ನನ್ನ ಹೆಂಡತಿ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದ. ಮಕ್ಕಳಿಗೆ ಆರಾಮ ಇಲ್ಲದೇ ಇದ್ದ ಕಾರಣ ದವಾಖಾನೆಗೆ ತೋರಿಸುವುದಾಗಿ ಹೇಳಿ ಚಾಸಾ 1 ರವರಿಂದ ರೂ.1500/- ಇಸಿದುಕೊಂಡು ನಮಗೆ ಸೇರಿದ ಬೈಕನಲ್ಲಿಯೇ ಮಕ್ಕಳನ್ನು ಹಾಗೂ ನನ್ನನ್ನು ವಂಕಲಕುಂಟಾ ಆಸ್ಪತ್ರೆಗೆ ಕರೆದುಕೊಂಡು ಹೋದ. ಅಂದು ದಿಃ 22-2-2023 ಆಗಿದ್ದು ಸಮಯ ಬೆಳಿಗ್ಗೆ ಸುಮಾರು 9-30 ಆಗಿತ್ತು. ವೈದ್ಯರಿಗೆ ಭೇಟಿ ಮಾಡಿದ ನಂತರ ನಮ್ಮನ್ನು ಯಾಪಲದಿನ್ನಿಯ ತರಲಕಟ್ಟಿ ಸೀಮಾದಲ್ಲಿರುವ ಹೋಲಕ್ಕೆ ಸಂಜೆ 4-30 ಗಂಟೆಗೆ ಕರೆದುಕೊಂಡು ಹೋದ. ನಮ್ಮನ್ನು ಬಂಡಿಜಾಡು ರಸ್ತೆಯಲ್ಲಿ ಇಳಿಸಿ ಹೋಲದಲ್ಲಿರುವ ಬಣವೆಯಿಂದ ಕುಡುಗೋಲು ತೆಗೆದುಕೊಂಡು ಬಂದ. ವರದಕ್ಷಿಣೆ ಹಣ ತೆಗೆದುಕೊಂಡು ಬಾ ಎಂದರೆ ತೆಗೆದುಕೊಂಡು ಬಂದಿಲ್ಲ, ಎದುರು ಮಾತನಾಡುತ್ತಿಯಾ ಕೊಲೆ ಮಾಡಿ ಮುಗಿಸುತ್ತೇನೆ ಎಂದು ಹೇಳಿ ಇಷ್ಟು ಜಾಗ ನಿನಗೆ ಸಾಕಾಗುತ್ತಾ ಎಂದು ತೋರಿಸಿದಾ ನಂತರ ಸೀರೆ ಜಗ್ಗಿ ಕಣ್ಣಿಗೆ ಹೊಡೆದಾ. ಕುಡುಗೋಲಿನಿಂದ ಕೈಗೆ, ತಲೆಗೆ, ಮೂಗಿಗೆ ಮತ್ತೆ ದೇಹದ ಸುಮಾರು 10-12 ಕಡೆ ಕಡಿದಾ. ನನ್ನ ಮಕ್ಕಳು ಬೇಡಾ ಎಂದರೂ ತಡೆಯಲು ಬಂದಾಗ ನಿಮ್ಮನ್ನು ಸಹಾ ಕಡಿದು ಬಿಡುತ್ತೇನೆ ಎಂದು ಹೇಳಿದ. ಆಗ ನನ್ನ ಮಕ್ಕಳು ಹೊರಟುಹೋದರು. ನಾನು ಆರೋಪಿಯಿಂದ ತಪ್ಪಿಸಿಕೊಂಡು ಚೀರಾಡುತ್ತಾ ಓಡುತ್ತಿರುವಾಗ ಯಾರೋ ನನ್ನನ್ನು ಬೇವೂರು ಆಸ್ಪತ್ರೆಗೆ ಅಂಬುಲೆನ್ಸನಲ್ಲಿ ಕಳುಹಿಸಿದರು. ನಂತರ ನನ್ನನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದರು.

**4).** ಸದರಿ ಆಸ್ಪತ್ರೆಗೆ ಚಾಸಾ 1 ಬಂದು ನನ್ನನ್ನು ಕೆ ಎಸ್ ಆಸ್ಪತ್ರೆಗೆ ದಾಖಲು ಮಾಡಿದರು. ನಂತರ ನಮ್ಮ ತಂದೆ ಕೇಸ್ ಮಾಡಿದರು. ನಾನು 4-5 ದಿನ

ಆಸ್ಪತ್ರೆಯಲ್ಲಿ ಇದ್ದೆ. ಅಲ್ಲಿಗೆ ಪೊಲೀಸರು ಬಂದು ನನ್ನ ಬಟ್ಟೆಗಳನ್ನು ಪಡೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ವತ್ತು ಪಟ್ಟಿ ನಂಬರಃ **19/2023** ರಲ್ಲಿರುವ ಐಟಂ ನಂಬರ **1** ಮತ್ತು **2** ಇವುಗಳನ್ನು ಮೊಹರು ಮಾಡಿದ ಬಟ್ಟೆ ಕವರಿನಲ್ಲಿ ಇರಿಸಲಾಗಿದ್ದು, ಸಾಕ್ಷಿದಾರರು ನೋಡಿ ಗುರುತಿಸಲು ಮೊಹರು ತೆರೆದು ಬಟ್ಟೆಗಳನ್ನು ತೋರಿಸಿದ್ದು, ಸಾಕ್ಷಿದಾರರು ಅವುಗಳನ್ನು ಗುರುತಿಸಿರುತ್ತಾರೆ. ಸದರಿ **2** ಬಟ್ಟೆಗಳನ್ನು ಮುದ್ದೆಮಾಲು-**1** ಮತ್ತು **2** ಎಂದು ಗುರುತಿಸಲಾಯಿತು. ಬಟ್ಟೆಗಳನ್ನು ಪಡೆದುಕೊಂಡ ನಂತರ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡರು. ಪಂಚನಾಮೆಯನ್ನು ನಿಪಿ **2** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **2**(ಎ) ಎಂದು ಗುರುತಿಸಲಾಯಿತು.

**5).** ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಪೊಲೀಸರು ಬಂದು ಘಟನೆಯಾದ ಯಾಪಲದಿನ್ನಿ ಹೊಲದ ಬಳಿ ಕರೆದುಕೊಂಡು ಹೋದರು. ಅಲ್ಲಿ ಒಂದು ಫೋಟೋ ತೆಗೆದು ಪಂಚನಾಮೆ ಮಾಡಿ ಸಹಿ ಪಡೆದುಕೊಂಡರು. ಸದರಿ ಪಂಚನಾಮೆ ಈಗ ನೋಡಿದ ದಾಖಲೆಯಾಗಿದ್ದು ಅದನ್ನು ನಿಪಿ **3** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **3**(ಎ) ಎಂದು ಗುರುತಿಸಲಾಯಿತು. ಈಗ ನೋಡಿದ ಕಚ್ಚಾ ನಕ್ಷೆಯಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ **4** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **4**(ಎ) ಎಂದು ಗುರುತಿಸಲಾಯಿತು. ಈಗ ನೋಡಿದ **3** ಫೋಟೋಗಳಲ್ಲಿ ನಾನು ಕಾಣುತ್ತೇನೆ. ಅವುಗಳನ್ನು ಪಂಚನಾಮೆ ಮಾಡಿದಾಗ ತೆಗೆಯಲಾಗಿತ್ತು. ಸದರಿ **3** ಫೋಟೋಗಳನ್ನು ಕ್ರಮವಾಗಿ ನಿಪಿ **5** ರಿಂದ **7** ಎಂದು ಗುರುತಿಸಲಾಯಿತು. ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಕುಡುಗೋಲು ನೋಡಿದರೆ ಗುರುತಿಸುತ್ತೇನೆ. ಸ್ವತ್ತು ಪಟ್ಟಿ ನಂಬರಃ **17/2023** ರಲ್ಲಿರುವ ಐಟಂ ನಂಬರ **1** ಕುಡುಗೋಲು ಮೊಹರು ಮಾಡಿದ ಬಟ್ಟೆ ಕವರಿನಲ್ಲಿ ಇರಿಸಲಾಗಿದ್ದು, ಸಾಕ್ಷಿದಾರರು ನೋಡಿ ಗುರುತಿಸಲು ಮೊಹರು ತೆರೆದು ಕುಡುಗೋಲನ್ನು ತೋರಿಸಿದ್ದು, ಸಾಕ್ಷಿದಾರರು ಅದನ್ನು ಗುರುತಿಸಿರುತ್ತಾರೆ. ಸದರಿ ಕುಡಗೋಲನ್ನು ಮುದ್ದೆಮಾಲು-**3** ಎಂದು ಗುರುತಿಸಲಾಯಿತು.

**6).** ನಮ್ಮನ್ನು ಆರೋಪಿ ಕರೆದುಕೊಂಡು ಹೋದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ನಮ್ಮ ತಂದೆ ಅದನ್ನು ಬಿಡಿಸಿಕೊಂಡಿದ್ದಾರೆ. ಈ ದಿನ ನ್ಯಾಯಾಲಯದ ಆವರಣದಲ್ಲಿ ಹಾಜರುಪಡಿಸಿರುವ ಸತ್ತುಪಟ್ಟಿ ಸಂಃ **17/2023**

ರಲ್ಲಿರುವ ಐಟಂ ನಂ.4  ಬೈಕನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಸದರಿ ಬೈಕನ್ನು ಮುದ್ದೆಮಾಲು-4 ಎಂದು ಗುರುತಿಸಲಾಯಿತು.

7). ಪೊಲೀಸರಿಗೆ ನಮ್ಮ ಮದುವೆ ಸಮಯ ಮುದ್ರಿಸಲಾದ ಲಗ್ನಪತ್ರಿಕೆಯನ್ನು ಕೊಟ್ಟಿದ್ದೆ. ಸದರಿ ದಾಖಲೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರವನ್ನು ನಾನು ನಮ್ಮ ತಂದೆಗೆ ಮತ್ತು ಪೊಲೀಸರಿಗೆ ಹೇಳಿದೆ.

ಪಾಟೀ ಸವಾಲು : ಆರೋಪಿಯ ಪರ ಸಿ ಎಲ್ ಎ ಡಿ ಸಿ

8). ಮುದ್ದೆಮಾಲು-4 ಬೈಕನ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಆರೋಪಿ ಬಳಿ ಬೈಕ ಇತ್ತು. ಅವರು 3-4 ಬೈಕಗಳನ್ನು ಬದಲಾಯಿಸಿದ್ದರು. ಕೊನೆಯದಾಗಿ ಅವರ ಬಳಿ ಡಿಸ್ಕವರಿ ಬೈಕ ಇತ್ತು. ಅದರ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಆರೋಪಿಗೆ ದ್ವಿಚಕ್ರ ವಾಹನ ಚಲಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರಿಂದ 7 ನಮ್ಮ ಸಂಬಂಧಿಕರು. ಚಾಸಾ 8 ನನ್ನ ತಾಯಿ. ಚಾಸಾ 9 ನನ್ನ ಮೈದುನ, ಚಾಸಾ 11 ನನ್ನ ಮಾವ. ಚಾಸಾ 12 ಚಿಕ್ಕಪ್ಪ. ಚಾಸಾ 13 ಮತ್ತು 14 ನನ್ನ ಸಂಬಂಧಿಕರು. ಚಾಸಾ 15 ರಿಂದ 17 ನಮ್ಮ ತಂದೆಗೆ ಆತ್ಮೀಯರು ಎಂದರೆ ಸರಿಯಲ್ಲ. ಚಾಸಾ 21 ಗುಂಡಮ್ಮ ವಾಲ್ಮೀಕಿ ಪರಿಚಯವಿಲ್ಲ.

9). ದಿಃ 22-02-2023 ರಂದು ಬೆಳಿಗ್ಗೆ 9-30 ಗೆ ಹಿರೇವಂಕಲಕುಂಟಾ ಖಾಸಗಿ ಆಸ್ಪತ್ರೆಗೆ ಹೋಗಿ ಅಲ್ಲಿ 2 ತಾಸು ಇದ್ದೆವು. ನನ್ನ ಮಕ್ಕಳಿಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಪೊಲಿಸಲು ನನ್ನನ್ನು ಕೆ ಎಸ್ ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿದ್ದರು. ಮದುವೆ ಸಮಯ 2 ತೊಲೆ ಬಂಗಾರ, 2 ಲಕ್ಷ ರೂ. ವರದಕ್ಷಿಣೆ ಕೊಡುವುದಾಗಿ ಮಾತುಕತೆಯಾಗಿತ್ತು ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಡುವಾಗ ತಿಳಿಸಿದ್ದೆ. ಆ ಮಾತುಕತೆ ಹಿರಿಯರ ಸಮಕ್ಷಮ ಆಗಿತ್ತು. ಆರೋಪಿ ಬೇಡಿಕೆ ಇಟ್ಟಿರಲಿಲ್ಲ ಆದರೆ ಹಿರಿಯರ ಸಮಕ್ಷಮ ಮಾತುಕತೆ ಆಗಿತ್ತು. ನಾವು 4-5 ವರ್ಷ ಚೆನ್ನಾಗಿದ್ದೆವು. ಮದುವೆಯಾದ ನಂತರ ಆರೋಪಿ ಮನೆಗೆ ನನ್ನನ್ನು ಕರೆದುಕೊಂಡು ಹೋದಾಗ ಆ ಮನೆಯಲ್ಲಿ ನಾನು ವಾಸ ಇರುವುದಿಲ್ಲ ಬಾಡಿಗೆ ಮನೆ ಮಾಡಿ ಎಂದು ನಾನು ಒತ್ತಾಯಿಸಿದ ಕಾರಣ ಆತ ಯಲಬುರ್ಗಾದಲ್ಲಿ ಬಾಡಿಗೆ ಮನೆ ಮಾಡಿದ್ದ ಎಂದರೆ ಸರಿಯಲ್ಲ. ಮದುವೆ ಆದ ಸಂದರ್ಭದಲ್ಲಿ ಆತ ತಂಗಿಯ

ಜೊತೆ ಅದೇ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ.

**10).** ಲಿಂಗನಬಂಡಿಯಿಂದ ಚಿಕ್ಕವಂಕಲಕುಂಟಾ ಸುಮಾರು **6-7** ಕಿ ಮೀ ದೂರದಲ್ಲಿದೆ. ದವಾಖಾನೆಯಲ್ಲಿ ಮಕ್ಕಳನ್ನು ತೋರಿಸಿಕೊಂಡ ನಂತರ ನಾವುಗಳು ಯಾಪಲದಿನ್ನಿಗೆ ಹೋದೆವು. ಚಿಕ್ಕವಂಕಲಕುಂಟಾದಿಂದ ಯಾಪಲದಿನ್ನಿ **7** ಕಿ ಮೀ ದೂರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕವಂಕಲಕುಂಟಾದಿಂದ ಯಾಪಲದಿನ್ನಿಗೆ ಸುಮಾರು **3-30** ರಿಂದ **4** ಗಂಟೆಗೆ ಬಂದೆವು. **1** ನೇ ತರಗತಿಯವರೆಗೂ ನನ್ನ ದೊಡ್ಡ ಮಗ ಯಲಬುರ್ಗಾದಲ್ಲಿ ಓದುತ್ತಿದ್ದ, **2** ನೇ ತರಗತಿಯಿಂದ ಲಿಂಗನಬಂಡಿ ಶಾಲೆಗೆ ಸೇರಿಸಿದಾಗ ನಮ್ಮ ತಂದೆ ಜೊತೆ ಇದ್ದ.

**11).** ನಿಪಿ **8** ಲಗ್ನಪತ್ರಿಕೆಯನ್ನು ನಾನು ಪೊಲೀಸರಿಗೆ ಕೊಟ್ಟಿರಲಿಲ್ಲ ಆದರೆ ನನ್ನ ಗಂಡ ಕೊಟ್ಟಿದ್ದ. ಆರೋಪಿ ನಮ್ಮನ್ನು ಯಾಪಲದಿನ್ನಿ ಹೊಲದ ಬಳಿ ಕರೆದುಕೊಂಡು ಹೋದಂತಹ ಸಮಯ ಅಕ್ಕಪಕ್ಕದ ಜಮೀನುಗಳಲ್ಲಿ ಯಾರು ಇರಲಿಲ್ಲ. ಆರೋಪಿ ಮೋಟರ ವೈಂಡಿಂಗ ಕೆಲಸ ಮಾಡಿ ಸಂಪಾದನೆ ಮಾಡುತ್ತಿದ್ದು ನನ್ನನ್ನು ಮಕ್ಕಳನ್ನು ನೋಡಿಕೊಳ್ಳುವ ಶಕ್ತಿ ಇತ್ತು ಹಾಗೂ ಹೆಚ್ಚಿನ ಹಣದ ಆಸೆ ಇರಲಿಲ್ಲ ಎಂದರೆ ಅವರಿಗೆ ಇತ್ತೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಆರೋಪಿ ನಿಮ್ಮ ತಂದೆಯಿಂದ ಹಣ ತೆಗೆದುಕೊಂಡು ಬರುವಂತೆ ಯಾವತ್ತೂ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು **30** ಸಾವಿರ ರೂ. ಹಣ ಮಾತ್ರ ಇದೆ ಎಂದು ಹೇಳಿದಾಗ ನಾನು ಆ ಹಣವನ್ನು ಆರೋಪಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷ್ಯ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ **2** ಲಕ್ಷ ರೂ. ವರದಕ್ಷಿಣೆ ತೆಗೆದುಕೊಂಡು ಬರುವಂತೆ ಕುಡಿದು ಬಂದು ಬೈಯ್ದು ಹೊಡೆ ಬಡೆ ಮಾಡಿರಲಿಲ್ಲ ಹಾಗೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಯಸ್ಸಾದ ತಂದೆ-ತಾಯಿ ಜೊತೆ ಇರೋಣಾ ಎಂದು ಆರೋಪಿ ಹೇಳಿದ್ದರೂ ಸಹಾ ನಾನು ಅವರನ್ನು ನೋಡಿಕೊಳ್ಳದೇ ಬೇರೆ ಮನೆ ಮಾಡಿಸಿದ್ದೆ ಎಂದರೆ ಸರಿಯಲ್ಲ. ಸಣ್ಣ ಪುಟ್ಟ ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ಆರೋಪಿ ತಂದೆ-ತಾಯಿ ಜೊತೆ ಜಗಳ ಮಾಡಿಕೊಂಡು ನನ್ನ ತವರುಮನೆಗೆ ಹೋಗಿದ್ದು, ಹಲವಾರು ಬಾರಿ ನನ್ನನ್ನು ಕಳುಹಿಸಿಕೊಡುವಂತೆ ನಮ್ಮ ತಂದೆಯವರನ್ನು ಕೇಳಿ ಕೊಂಡಿದ್ದರೂ ಸಹಾ ಅವರು ನನ್ನನ್ನು ಕಳುಹಿಸಿರಲಿಲ್ಲ

ಎಂದರೆ ಸರಿಯಲ್ಲ.

**12).** ಇಷ್ಟು ಜಾಗ ನಿನಗೆ ಸಾಕಾಗುತ್ತಾ ಎಂದು ನಮ್ಮ ಹೊಲದಲ್ಲಿರುವ ಜಾಗವನ್ನು ಆರೋಪಿ ತೋರಿಸಿದ್ದ. ಆರೋಪಿ ಸೀರೆ ಜಗ್ಗಿ ಕಣ್ಣಿಗೆ ಹೊಡೆದಾ ಎಂದು ಪೊಲೀಸರಿಗೆ ಹೇಳಿಕೆ ಕೊಡುವಾಗ ಹೇಳಿರಲಿಲ್ಲ. ಈ ದಿನವೇ ಮೊದಲ ಬಾರಿ ಅದನ್ನು ಹೇಳುತ್ತಿದ್ದೇನೆ. ಪೊಲೀಸರಿಗೆ ಹೇಳಿಕೆ ಕೊಡುವಾಗ ಕಬ್ಬಿಣದ ಕುಡುಗೋಲಿನಿಂದ ಆರೋಪಿ ಹಲ್ಲೆ ಮಾಡಿದ ಎಂದು ಹೇಳಿದ್ದೆ. ಮುದ್ದೆಮಾಲು-3 ಕುಡುಗೋಲಿಗೆ ಕಟ್ಟಿಗೆ ಹಿಡಿ ಇದೆ ಎಂದರೆ ಅದರಿಂದಲೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಅಂತಹ ಕುಡುಗೋಲು ರೈತರ ಮನೆಗಳಲ್ಲಿ ಇರುತ್ತದೆ ಎಂದರೆ ಕೆಲವು ಮನೆಗಳಲ್ಲಿ ಇರುತ್ತದೆ ಕೆಲವು ಮನೆಗಳಲ್ಲಿ ಇರುವುದಿಲ್ಲ ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

**13).** ತಂದೆ-ತಾಯಿಯನ್ನು ನೋಡಿಕೊಂಡು ಇಲ್ಲೇ ಇರೋಣಾ ಎಂದು ಹೇಳಿದರೂ ಸಹಾ ನಾನು ಮನೆ ಬಿಟ್ಟು ತವರುಮನೆಗೆ ಹೋಗಿ ಅಲ್ಲೆ ವಾಸ ಇದ್ದು ಯಾಪಲದಿನ್ನಿಗೆ ವಾಪಸ್ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಅಂಬುಲೆನ್ಸನಲ್ಲಿ ಯಾರು ಆಸ್ಪತ್ರೆಗೆ ಕಳುಹಿಸಿದರೆಂದು ಇಲ್ಲಿಯವರೆಗೂ ಗೊತ್ತಿಲ್ಲ. ನಾನು ಆ ದಿನ ಹಾಕಿಕೊಂಡಿದ್ದ ಸೀರೆ ಬ್ಲೌಜ್ ಮತ್ತು ಲಂಗದ ಮೇಲೆ ರಕ್ತದ ಕಲೆಗಳು ಆಗಿದ್ದವು. ಮೊದಲು ಬೇವೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಹೋಗಿದ್ದೆ. ಆ ಆಸ್ಪತ್ರೆಯಲ್ಲಿ ಗಾಯಗಳು ಹೇಗಾಯಿತು ಎಂದು ವೈದ್ಯರು ವಿಚಾರಿಸಲಿಲ್ಲ ಆದರೆ ಚಿಕಿತ್ಸೆ ಕೊಡುವುದಿಲ್ಲ ಮುಂದಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿ ಕಳುಹಿಸಿದರು. ಬೇವೂರು ಆಸ್ಪತ್ರೆಗೆ ಸಂಜೆ **4-30** ಗಂಟೆಗೆ ಹೋಗಿದ್ದೆ. ಅಂಬುಲೆನ್ಸನಲ್ಲಿ ನನ್ನ ಜೊತೆ ಆ ಆಸ್ಪತ್ರೆಗೆ ಯಾರೆಲ್ಲಾ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ಅಂಬುಲೆನ್ಸನಲ್ಲಿ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಬಂದಿದ್ದೆ. ಸದರಿ ಆಸ್ಪತ್ರೆಗೆ ಬಂದಾಗ ಎಷ್ಟು ಹೊತ್ತು ಆಗಿತ್ತು ಎಂದು ನನಗೆ ಗೊತ್ತಿಲ್ಲ, ಕಣ್ಣಿಗೆ ಗಾಯ ಆಗಿದ್ದರಿಂದ ನಾನು ಅಷ್ಟೊಂದು ಲಕ್ಷ್ಯ ಕೊಟ್ಟಿರಲಿಲ್ಲ. ಯಾರು ನನ್ನನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ. ನನ್ನ ತಮ್ಮ ಬಸವರಾಜ ಸದರಿ ಆಸ್ಪತ್ರೆಗೆ ಬಂದಾಗ ಇರಲಿಲ್ಲ.

**14).** ದಿಃ **22-2-2023** ರಂದು ನಾನು ನನ್ನ ತಮ್ಮ ಬಸವರಾಜನ ಜೊತೆ ಬೈಕ ಮೇಲೆ ಹೋಗುತ್ತಿದ್ದಾಗ ನಾನು ಬಿದ್ದು ಗಾಯ ಮಾಡಿಕೊಂಡಿದ್ದು, ಅದೇ

ಇತಿಹಾಸವನ್ನು ನನ್ನ ತಮ್ಮ ಆಸ್ಪತ್ರೆಯಲ್ಲಿ ಹೇಳಿ ಬರೆಸಿದ್ದ ಎಂದರೆ ಸಾಕ್ಷಿದಾರರು ನನ್ನನ್ನು ಆಸ್ಪತ್ರೆಗೆ ನನ್ನ ಗಂಡ ಕರೆದುಕೊಂಡು ಹೋಗಿದ್ದ ಎಂದು ನುಡಿದಿರುತ್ತಾರೆ. ಕುಡುಗೋಲಿನಿಂದ ಹಲ್ಲೆ ಮಾಡಿದ ಕಾರಣ ನನ್ನ ಮೇಲೆ ಗಾಯಗಳಾಗಿರುತ್ತವೆ ಎಂದು ಕೊಪ್ಪಳ ಜಿಲ್ಲಾ ಆಸ್ಪತ್ರೆಯ ವೈದ್ಯರಿಗೆ ನಾನು ಹೇಳಿದ್ದೆ.

**15).** ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ನಾನು ಇದ್ದಾಗ ಪೊಲೀಸರು ಬಂದಿದ್ದರೋ ಇಲ್ಲವೋ ನಾನು ನೋಡಿರಲಿಲ್ಲ. ಸದರಿ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿರಲಿಲ್ಲ ನಮ್ಮ ತಂದೆ ಕೂಡಲೇ ಬಂದು ಕೆ ಎಸ್ ಆಸ್ಪತ್ರೆಗೆ ಸೇರಿಸಿದ್ದರು. ನಮ್ಮ ತಂದೆ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಬಂದಾಗ ಘಟನೆಯ ಬಗ್ಗೆ ಅವರಿಗೆ ಮಾಹಿತಿ ಕೊಟ್ಟಿದ್ದೆ. ಆರೋಪಿ ಕುಡುಗೋಲಿನಿಂದ ಹಲ್ಲೆ ಮಾಡಿದ ಕಾರಣ ನನ್ನ ದೇಹದ ಮೇಲೆ **10-12** ಜಾಗಗಳಲ್ಲಿ ಗಾಯಗಳು ಆಗಿರಲಿಲ್ಲ ಹಾಗೂ ನಾನು ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**16).** ಕೊಪ್ಪಳ ಜಿಲ್ಲಾ ಆಸ್ಪತ್ರೆಯಿಂದ ಕೆ ಎಸ್ ಆಸ್ಪತ್ರೆಗೆ ನನ್ನ ತಂದೆ ಕರೆದುಕೊಂಡು ಹೋದಾಗ ರಾತ್ರಿ ಆಗಿತ್ತು. ಇದೊಂದು ಹಲ್ಲೆ ಪ್ರಕರಣ ಆದ ಕಾರಣ ನನ್ನನ್ನು ಕರೆದುಕೊಂಡು ಹೋಗಲು ಬಿಡುವುದಿಲ್ಲ ಎಂದು ಕೊಪ್ಪಳ ಜಿಲ್ಲಾ ಆಸ್ಪತ್ರೆಯ ವೈದ್ಯರು ಹೇಳಿರಲಿಲ್ಲ. ದಿಃ **27-2-2023** ರಂದು ಕೆ ಎಸ್ ಆಸ್ಪತ್ರೆಗೆ ಪೊಲೀಸರು ಬಂದು ನನ್ನ ಬಟ್ಟೆಗಳನ್ನು ತೆಗೆದುಕೊಂಡಿದ್ದರು. ಸದರಿ ಆಸ್ಪತ್ರೆಯಲ್ಲಿ **4-5** ದಿನಗಳು ಇದ್ದೆ. ಕೆ ಎಸ್ ಆಸ್ಪತ್ರೆ ವೈದ್ಯರಿಗೆ ಘಟನೆ ಹೇಗಾಯಿತು ಎಂದು ಮಾಹಿತಿ ಕೊಟ್ಟಿದ್ದೆ. ಸದರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುತ್ತಿದ್ದಾಗ ನನ್ನನ್ನು ಮಾತನಾಡಿಸಲು ನಮ್ಮ ಊರಿನವರು ಬಂದಿರಲಿಲ್ಲ. ನಂತರ ನನ್ನ ಕಣ್ಣಿಗೆ ಗಾಯವಾದ ಕಾರಣ ನಾನು ಅಷ್ಟಾಗಿ ಗಮನಿಸಿರಲಿಲ್ಲ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಪೊಲೀಸರಿಗೆ ಸೀರೆ ಮತ್ತು ಲಂಗ ಮಾತ್ರ ನಾನು ಕೊಟ್ಟಿದ್ದು ಬ್ಲೌಜ್ ಕೊಟ್ಟಿರಲಿಲ್ಲ. ನಾನು ಬಟ್ಟೆಗಳನ್ನು ಕೊಟ್ಟಾಗ **12-30** ಗಂಟೆಯಾಗಿತ್ತು. ಬಟ್ಟೆಗಳನ್ನು ತೆಗೆದುಕೊಂಡಾಗ ಆಸ್ಪತ್ರೆಯಲ್ಲಿ ಒಂದು ಫೋಟೋ ತೆಗೆದಿದ್ದರು. ಪರಶುರಾಮ ದಳವಾಯಿ ಮತ್ತು ಮಾರುತಿ ಎಂಬ ಪೊಲೀಸರು ಆ ಆಸ್ಪತ್ರೆಗೆ ಬಂದಾಗ ಬಟ್ಟೆಗಳನ್ನು ಕೊಟ್ಟಿದ್ದೆ.

**17).** ಘಟನೆಯಾದ ಎಷ್ಟು ದಿನಗಳ ನಂತರ ನಾನು ಲಿಂಗನಬಂಡಿಗೆ ಹೋದೆ ಎಂದು ಗೊತ್ತಿಲ್ಲ. ಆದರೆ **4-5** ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೋಗಿದ್ದೆ. ಆಸ್ಪತ್ರೆಯಲ್ಲಿ ತೆಗೆದ ಫೋಟೋ ಮೊಬೈಲ ಫೋನಿನಲ್ಲಿ ತೆಗೆದಿದ್ದರು. ನಿಪಿ **5** ರಿಂದ **7** ಫೋಟೋಗಳನ್ನು ಮುಂಜಾನೆ ತೆಗೆಯಲಾಗಿತ್ತು ಆದರೆ ಸಮಯ ಎಷ್ಟಾಗಿತ್ತೆಂದು ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ತಯಾರಿಸಿದ ಪಂಚನಾಮೆ ಸಮಯ ಪೊಲೀಸರು ಯಾರನ್ನು ಏನೂ ಕೇಳಿರಲಿಲ್ಲ. ಅದರಲ್ಲಿರುವ ಮಾಹಿತಿಯನ್ನು ಅವರೇ ಬರೆದುಕೊಂಡರು. ಆರೋಪಿ ನನ್ನಮೇಲೆ ಹಲ್ಲೆ ಮಾಡಿರುತ್ತಾನೆ ಎಂದು ನಾನು ಮುಖ್ಯ ವಿಚಾರಣೆ ಸಮಯ ಹೇಳಿದ ವಿಚಾರ ಮತ್ತು ನಿಪಿ **5** ರಿಂದ **7** ಫೋಟೋಗಳನ್ನು ತೆಗೆದ ಜಾಗ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ.

**18).** ನಮ್ಮ ತಂದೆಗೆ ಸೇರಿದ ಮುದ್ದೆಮಾಲು-**4** ಬೈಕಿನ ಮೇಲೆ ನಾನು ಹೋಗುತ್ತಿದ್ದಾಗ ಬಿದ್ದು ಗಾಯ ಮಾಡಿಕೊಂಡಿದ್ದು, ಆರೋಪಿ ಮತ್ತು ಅವರ ತಂದೆ-ತಾಯಿಯ ಮೇಲೆ ನನಗೆ ಬಹಳ ಸಿಟ್ಟು ಇರುವ ಕಾರಣ ನಮ್ಮ ತಂದೆಯ ಕಡೆಯಿಂದ ಸುಳ್ಳು ದೂರು ಕೊಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ **4** ನಕ್ಷೆ ಮೇಲೆ ನಾನು ಹೊಲದ ಬಳಿ ಪಂಚನಾಮೆ ಮಾಡಲು ಪೊಲೀಸರು ಬಂದಾಗ ಸಹಿ ಮಾಡಿದ್ದೆ. ಪೊಲೀಸರು ನನ್ನ ಸಮಕ್ಷಮ ಗುನ್ಹೆ ಸ್ಥಳದ ಪಂಚನಾಮೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಗೆ ನನ್ನನ್ನು ಕರೆಸಿ ಎಲ್ಲಾ ದಾಖಲೆಗಳ ಮೇಲೆ ಸಹಿಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ.

**19).** ನಾನು ಮುಖ್ಯ ವಿಚಾರಣಾ ಸಮಯ ಹೇಳಿದಂತಹ ಘಟನೆಗಳು ಆಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಮತ್ತು ಇಂತಹ ಘಟನೆ ಆಗದೇ ಇದ್ದರೂ ನನ್ನ ತಂದೆಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವರದಕ್ಷಿಣೆ ಹಣ ತರುವಂತೆ ಯಾವತ್ತೂ ಒತ್ತಾಯ ಮಾಡಿರುವುದಿಲ್ಲ ಹಾಗೂ ನನ್ನ ಮೇಲೆ ಹೊಡೆ ಬಡಿ ಮಾಡಿ ಕಿರುಕುಳ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಾಗಲೀ ಅಥವಾ ಅವರ ಮನೆಯವರಾಗಲೀ ವರದಕ್ಷಿಣೆ ಹಣ ತರುವಂತೆ ಒತ್ತಾಯ ಮಾಡಿ ಕಿರುಕುಳ ಕೊಡುತ್ತಿದ್ದಾರೆ ಎಂದು ನಾನು ಪೊಲೀಸರಿಗೆ ದೂರು ಕೊಟ್ಟಿರಲಿಲ್ಲ. ಆರೋಪಿ ನಮ್ಮನ್ನು **4-5** ವರ್ಷಗಳು ಮಾತ್ರ ಚೆನ್ನಾಗಿ ನೋಡಿಕೊಂಡಿದ್ದ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲು-1 ರಿಂದ 3 ಇವುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.